ಇದ್ರೆ ನಮಗೇನ್ಮಾಡುತ್ತೆ, ಸುಮ್ನೆ ಬನ್ನಿ' ಅಂದಾಗ ಒಂದು ಕತೆ ಚಾಲಕನ ಬಾಯಿಂದ ಹೊರಬಿತ್ತು. ಒಂದು ಸಲ ನಮ್ಮ ಮೊಹಲ್ಲಾದ ಆಸ್ಪತ್ರೆಗೆ ಒಬ್ಬ ಗಿರಾಕಿಯನ್ನು ಬಿಟ್ಟ ಚಾಲಕ ಅಲ್ಲೇ ಆಟೊ ಸ್ಟಾಂಡಿನಲ್ಲಿ ಗಿರಾಕಿಗಾಗಿ ಕಾಯುತ್ತ ನಿಂತಿರುವಾಗ ಇಬ್ಬರು ಗಿರಾಕಿಗಳು ಬಂದು ಬರ್‍ತೀಯೇನಪ್ಪ ಎಂದು ಕೇಳಿ ಆಟೊನಲ್ಲಿ ಕೂತುಗೊಂಡರು. ಇಂಗೇ ಮೇಲಕ್ಕೆ ನಡಿಯಪ್ಪ ಅಂದರು. ಗಿರಾಕಿಗಳ ಆದೇಶದಂತೆ ಮೇಲಕ್ಕೆ ಹೋಗಿ ಬಲಕ್ಕೆ ತಿರುಗಿದಾಗ ಪೊಲೀಸ್ ಸ್ಟೇಷನ್ ಕಾಣ್ತಾ ಇದೆ! ನಡಿ ಒಳಕ್ಕೆ ಅಂದರು ಗಿರಾಕಿಗಳು! ಕಕ್ಕಾಬಿಕ್ಕಿಯಾದ ಚಾಲಕ ಸ್ಟೇಷನ್ ಒಳಕ್ಕೆ ಆಟೊ ಬಿಟ್ಟು ಒಂದು ಪಕ್ಕಕ್ಕೆ ನಿಲ್ಲಿಸಿದ. ಏನೊ ಎಡವಟ್ಟಾಗಿದೆ ಅಂತ ಜೀವ ಒಳಗೊಳಗೆ 'ಪುಕಪುಕ' ಅನ್ನತೊಡಗಿತು. ನಿಂತಿರು ಇಲ್ಲಿ ಎಂದು ಗತ್ತಿನಿಂದ ಒಳಕ್ಕೆ ಹೋದ ಗಿರಾಕಿಗಳು ಇನ್ನೊಬ್ಬನೊಡನೆ ಹೊರಕ್ಕೆ ಬಂದರು. ಇನ್ನೊಬ್ಬ ಬಂದವನೆ ಚಾಲಕನನ್ನು ನೋಡಿ ತಬ್ಬಿಬ್ಬಾಗಿ, ಬರುತ್ತಿದ್ದ ನಗುವನ್ನು ತಡೆದುಕೊಂಡು, ಯಾಕ್ರಯ್ಯ ಇವರ್‍ನ ಕರ್‍ಕೊಂಬಂದ್ರಿ? ಇವ್ರ ಮುಖ ನೋಡಿದ್ರೆ ಉಡಿಗೀರ್‍ನ ಚುಡಾಯಿಸೋರಂಗೆ ಕಾಣ್ತಾರ? ಯಾವ ಉಡ್ಗೀಗೆ ಇವ್ರು ಕಣ್ ಒಡಿಯೋದು ನೋಡಿದ್ರಿ ನೀವು? ಎಂದು ತರಾಟೆಗೆ ತೆಗೆದುಕೊಂಡ. ಮಫ್ತಿಯಲ್ಲಿದ್ದ ಆ ಪಿ.ಸಿ.ಗಳು ಅಣ್ಣಾ, ನೀವು ಆಸ್ಪತ್ರೆ ಎದುರ್‍ಗಿರೊ ಸ್ಟಾಂಡಿನ ಆಟೊ ಡ್ರೈವರ್‌ಗಳನ್ನ ಕರಕಂಡ್ ಬನ್ನಿ ಅಂದ್ರಲ್ಲಾ, ಇವ್ರು ಅಲ್ಲಿದ್ರು. ಅದಕ್ಕೆ ಕರ್‍ಕಂಬಂದಿದೀವಿ ಎಂದರು. ಪಿ.ಸಿ.ಗಳನ್ನ ತರಾಟೆಗೆ ತೆಗೆದುಕೊಂಡ ಹೆಡ್ ಕಾನ್‌ಸ್ಟೆಬಲ್ ಕೊಪಲಿನವ್ನೆ. ಪೊಲೀಸ್ ಸ್ಟೇಷನ್‌ಗೆ ಆಸ್ಪತ್ರೆ ಎದುರಿಗಿರೊ ಸ್ಟಾಂಡ್‌ನಲ್ಲಿ ಪಡ್ಡೆ ಆಟೊ ಚಾಲಕರು ಹುಡುಗೀರ್‍ನ ಚುಡಾಯಿಸ್ತಾರೆ ಅಂತ ಕಂಪ್ಲೆಂಟ್ ಬಂದಿತ್ತು.

ಅದಕ್ಕಾಗಿ ದಫೇದಾರ ಕಳಿಸಿದ್ದ ಪಿ.ಸಿ.ಗಳು ನಮ್ಮ ಚಾಲಕನನ್ನು ಸ್ಟೇಷನ್‌ಗೆ ಕರ್‍ಕೊಂಡು ಹೋಗಿದ್ರು. ಆಗ ಕೊಪ್ಪಲಿನ ದಫೇದಾರ ಚಾಲಕನಿಗೆ ಅಣ್ಣಾ, ಇವ್ರು ಆ ಪಡ್ಡೆ ಉಡುಗ ಡ್ರೈವರ್‌ಗಳನ್ನ ಕರ್‍ಕಂಡ್ ಬನ್ನಿ ಅಂದ್ರೆ, ನಿಮ್ಮನ್ನ ಇಡ್ಕಂಡ್ ಬಂದವ್ರೆ. ನೀವು ಬೇಜಾರು ಮಾಡ್ಕಂಬೇಡಿ ಅಂತ ಕಳಿಸ್ದ. ಅವತ್ತಿನಿಂದ ನಂಗೆ ಪೊಲೀಸ್ ಸ್ಟೇಷನ್ ಅಂದ್ರೆ ಒಂತರಾ ಮುಜುಗ್ರ ಎಂದು ಚಾಲಕ ಹೇಳಿದಾಗ ಅವನ ಹಿಂಜರಿಕೆಯ ಗುಟ್ಟು ತಿಳಿಯಿತು.

ನಮ್ಮ ಚಾಲಕನೆಂಬ ಸಭ್ಯ, ನಿರುಪದ್ರ ಜೀವಿ ಹೀಗೆ ಅನೇಕಾನೇಕ ಜೀವನಾನುಭವದ ತುಣುಕುಗಳನ್ನು ನಾವು ಸವಿಯುವಂತೆ ಮಾಡುತ್ತಿರುತ್ತಾನೆ ಎಂಬಲ್ಲಿಗೆ ಈ ಕೋಬ್ರಾಕಿಂಗ್ ಕಥಾನಕಕ್ಕೆ ಮುಕ್ತಾಯ.

## ಪದ್ಮಾ ಶ್ರೀರಾಮ್

ಮೈಸೂರಿನಲ್ಲಿ ನೆಲೆಸಿರುವ ಪದ್ಮಾ ಶ್ರೀರಾಮ್ ಸಸ್ಯಶಾಸ್ತ್ರದಲ್ಲಿ ಎಂ.ಎಸ್ಸಿ ಪದವಿ ಪಡೆದಿದ್ದಾರೆ. ಕೃಷಿ ಹಾಗೂ ಸಸ್ಯಜೀವಗಳ ಬಗ್ಗೆ ವಿಶೇಷ ಆಸಕ್ತಿ ಹೊಂದಿರುವ ಅವರು ನಾಡಿನ ಅನೇಕ ಪತ್ರಿಕೆಗಳಲ್ಲಿ ಸಸ್ಯಗಳ ವಿಶೇಷತೆಯ ಕುರಿತು ಲೇಖನಗಳನ್ನು ಬರೆದಿದ್ದಾರೆ. ಸಸ್ಯ ಲೇಖನಗಳ ಸಂಗ್ರಹ 'ಗಿಡಗಂಟೆಯ ಕೊರಳು' ಪ್ರಕಟವಾಗಿದೆ. ನಾಡಿನ ಅನೇಕ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿದ್ದಾರೆ.